ದಿನಾಂಕಃ 30-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಎಂ ಬಿ ಎ ಪದವಿ ವ್ಯಾಸಂಗ ಮಾಡಿರುತ್ತೇನೆ. ನಾನು ಬೆಂಗಳೂರಿನ ಸಾಫ್ಟವೇರ ಕಂಪನಿಯಲ್ಲಿ ಸುಮಾರು 2010 ರಿಂದ ಕೆಲಸ ಮಾಡುತ್ತಿದ್ದೇನೆ. ನಾನು 2010 ರಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನಗೆ 2023 ನೇ ಸಾಲಿನಲ್ಲಿ ನನಗೆ ಮಾಸಿಕ ವೇತನ ರೂ. 2,00,000/- ಇತ್ತು. ನಾನು ಕಂಪನಿಯಲ್ಲಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನನಗೆ ಮಾಸಿಕ ವೇತನ ರೂ. 2,00,000/- ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನಾನು 2015 ರಿಂದ 2020 ರ ಅವಧಿಯಲ್ಲಿ ಮಾಸಿಕ ವೇತನ ರೂ. 1,00,000/- ಮೇಲ್ಪಟ್ಟು ಇರುತ್ತದೆ.

2) ನನ್ನ ತಂದೆಯ ಹೆಸರು ರಾಮಕೃಷ್ಣ ಎಂದರೆ ಸರಿ. ನನ್ನ ತಂದೆ 2 ನೇ ಹಂತದ ಕೋವಿಡ್ ಸಮಯಲ್ಲಿ ತೀರಿಕೊಂಡಿರುತ್ತಾರೆ. ಆರೋಪಿಯ ಊರು ಜಟ್ಟಿಹುಂಡಿ ಗ್ರಾಮ. ಆರೋಪಿಯ ಪತ್ನಿಯ ಹೆಸರು ಗೊತ್ತಿರುವುದಿಲ್ಲ. ಆರೋಪಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸುಮಾರು 10 ರಿಂದ 15 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ನಮ್ಮಮನೆಯ ಕಟ್ಟಡ ನಿರ್ಮಾಣ ಮಾಡಲು ಬಂದಿರುತ್ತಾರೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ.

3) 13/08/2023 ರಂದು ಆರೋಪಿಗೆ ನಾನು ರೂ. 5,00,000/-ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಆರೋಪಿಗೆ ಹಣ ನೀಡುವಾಗ ಸಮಯ ಬೆಳ್ಳಿಗೆ 6 ರಿಂದ 7 ಗಂಟೆ ಆಗಿರಬಹುದು. ಆ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೇವು. ದಿನಾಂಕ 13/08/2023 ನಾನು ಗಂಧನಹಳ್ಳಿಯಲ್ಲಿ ಇರುತ್ತೇನೆ. ದಿನಾಂಕ 13/08/2023 ರಂದು ನಾನು ಮನೆಯಲ್ಲಿ ಕಂಪನಿ ಪರವಾಗಿ ಕೆಲಸ ಮಾಡುತ್ತಿದ್ದೆ. ಸದರಿ ದಿನ ನಾನು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಹಾಜರಾತಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

4) ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನನ್ನ ಆದಾಯ ತೆರಿಗೆಯ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಆರೋಪಿಗೆ ನೀಡಿದ್ದೇನೆ ಹೇಳುವ ಮೊತ್ತವನ್ನು ಆದಾಯ ತೆರಿಗೆ ದಾಖಲಾತಿಗಳಲ್ಲಿ ನಮೂದು ಮಾಡಿರುವುದಿಲ್ಲ.

5) ನಿಪಿ-01 ಚೆಕ್ಕನ್ನು ದಿನಾಂಕ 02/02/2024 ರಂದು ಆರೋಪಿ ನೀಡಿರುತ್ತಾರೆ. ಆರೋಪಿ ಚೆಕ್ಕನ್ನು ಭರ್ತಿ ಮಾಡಿ ನೀಡಿರುತ್ತಾರೆ. ನಾನು ಈ ಪ್ರಕರಣವನ್ನು ಹೊರತುಪಡಿಸಿ ಇನ್ನೊಂದು ಪ್ರಕರಣವನ್ನು ಲೋಕೇಶ ಎಂಬುವವರ ವಿರುದ್ಧ ದಾಖಲು ಮಾಡಿರುತ್ತೇನೆ ನಾನು ಬೆಂಗಳೂರಿನ ನ್ಯಾಯಾಲಯದಲ್ಲಿ ಸಹ ಒಂದು ಚೆಕ್ಕು ಅಮಾನ್ಯ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿ.

6) ನನ್ನ ತಂದೆ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಲೋಕೇಶ ರವರ ವಿರುದ್ಧ ರೂ. 3,00,000/- ಹಣದ ಬಾಬ್ತು ದಾಖಲು ಮಾಡಿರುತ್ತೇನೆ. ಸದರಿ ಲೋಕೇಶ ರವರಿಗೆ ಹಣ ಪಾವತಿ ಮಾಡಿದ ದಿನಾಂಕ ನೆನಪಿರುವುದಿಲ್ಲ. ಮಧುರಾಜ ರವರ ವಿರುದ್ಧ ಬೆಂಗಳೂರಿನ ನ್ಯಾಯಾಲಯದಲ್ಲಿ ರೂ. 6,00,000/- ಬಾಬತು ಪ್ರಕರಣ ದಾಖಲು ಮಾಡಿರುತ್ತೇನೆ. ಆರೋಪಿ ನೀಡಿದ್ದೇನೆ ಎಂದು ಹೇಳುವ ರೂ. 5,00,000/- ಹಣ ನನ್ನ ಬಳಿ ಇತ್ತು ಎಂದು ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ಆರೋಪಿಗೆ ರೂ.5,00,000/- ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ರೂ. 5,00,000 ಸಾಲ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

7) ಆರೋಪಿ ನನ್ನ ತಂದೆಗೆ ರೂ. 1,00,000 ಮೌಲ್ಯದ ಚೀಟಿ ಹಣದ ಭದ್ರತೆಗಾಗಿ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ನನ್ನ ತಂದೆ ತೀರಿಕೊಂಡ ನಂತರ ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು, ಹೆಂಡತಿ ಮತ್ತು ಮಕ್ಕಳು ಬೆಂಗಳೂರಿನ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇವೆ. ಮಾಸಿಕ ಬಾಡಿಗೆ ರೂ. 20,000/- ಪಾವತಿ ಮಾಡುತ್ತೇನೆ. ನನ್ನ ಕುಟುಂಬ ಪೋಷಣೆಗಾಗಿ ಮತ್ತು ಮಕ್ಕಳ

ವಿದ್ಯಾಭ್ಯಾಸಕ್ಕಾಗಿ ಒಟ್ಟು ರೂ. 40,000/- ಖರ್ಚು ಬರುತ್ತದೆ. ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಾರ್ಷಿಕವಾಗಿ ತಲಾ ರೂ. 80,000/- ಖರ್ಚು ಆಗುತ್ತದೆ. ಆರೋಪಿ ಕಟ್ಟಡ ನಿರ್ಮಾಣ ಗುತ್ತಿಗೆದಾರರಾಗಿರುತ್ತಾರೆ. ಆರೋಪಿ ಗಾರೆ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸಾಲ ತೀರಿಸುವ ಉದ್ದೇಶಕ್ಕಾಗಿ ನನ್ನ ಬಳಿ ಹಣವನ್ನು ಪಡೆದುಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ